ಸ್ವಾತಂತ್ರ್ಯದ ಅಮೃತಮಹೋತ್ಸವ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343 ಇ-ಮೇಲ್ ವಿಳಾಸ : director.ahr.kptcl@gmail.com

**ಸಂಖ್ಯೆ: ಕವಿಪ್ರನಿನಿ/ಬಿ16/21723/2021-22** **ದಿನಾಂಕ: 06.12.2023**

## ಅಧಿಸೂಚನೆ

**ವಿಷಯ:** ಕವಿಪ್ರನಿನಿಯಲ್ಲಿ ಸಹಾಯಕ ಇಂಜಿನಿಯರ್ (ಸಿವಿಲ್) ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಹೆಚ್ಚುವರಿ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಬಗ್ಗೆ.

**ಉಲ್ಲೇಖ:** 1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/21723/2021-22 ದಿನಾಂಕ: 01.02.2022.
2. ದಾಖಲಾತಿಗಳ ಪರಿಶೀಲನೆಗೆ ಸಂಬಂಧಿಸಿದಂತೆ ಹೊರಡಿಸಿದ ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ ಬಿ16/21723/ 2021-22 ದಿನಾಂಕ: 01.03.2023, 10.03.2023, 15.06.2023, 06.07.2023 ಹಾಗೂ 24.11.2023.

********

ಉದ್ಯೋಗ ಪ್ರಕಟಣೆ ಸಂಖ್ಯೆ ಕವಿಪ್ರನಿನಿ/ಬಿ16/21723/2021-22 ದಿನಾಂಕ 01.02.2022 ಕ್ಕೆ ಅನುಗುಣವಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿವಿಧ ಎಸ್ಕಾಂಗಳಲ್ಲಿ ಸಹಾಯಕ ಇಂಜಿನಿಯರ್ (ಸಿವಿಲ್) ಹುದ್ದೆಗಳಿಗೆ ಸಂಬಂಧಿಸಿದಂತೆ, ಹೆಚ್ಚುವರಿ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಯನ್ನು ದಿನಾಂಕ 29.11.2023 ರಂದು ನಡೆಸಲಾಗಿರುತ್ತದೆ. ಆದರೆ, ಸಹಾಯಕ ಇಂಜಿನಿಯರ್ (ಸಿವಿಲ್) (ಎನ್.ಹೆಚ್.ಕೆ.) ವೃಂದದಡಿಯಲ್ಲಿ ಪರಿಶಿಷ್ಟ ಜಾತಿ-ಮಹಿಳಾ ಕೋಟಾದಲ್ಲಿ ಅಭ್ಯರ್ಥಿಗಳ ಕೊರತೆಯಿರುವುದರಿಂದ, ಹೆಚ್ಚುವರಿ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಅವಶ್ಯಕತೆ ಇರುತ್ತದೆ. ತತ್ಸಂಬಂಧ ಮೂಲ ದಾಖಲಾತಿ ಪರಿಶೀಲನೆ ಅವಶ್ಯಕತೆ ಇರುವಂತಹ ಹೆಚ್ಚುವರಿ ಅಭ್ಯರ್ಥಿಗಳ ಪಟ್ಟಿ ಈ ಕೆಳಗಿನಂತೆ ಇರುತ್ತದೆ:

| Sl. No. | Application ID | Name | Father/Husband Name |
|---|---|---|---|
| 1 | KPAC1033588 | SHWETHA H | HANUMANTHA |
| 2 | KPAC1035946 | SUSHMITHA C C | CHANDRASHEKARA |
| 3 | KPAC1034074 | RUCHITHA M | MAHADEVAIAH |
| 4 | KPAC1052488 | PADMA V | VENKATARAVANAPPA |

ಈ ಮೇಲೆ ತಿಳಿಸಿರುವ ಅಭ್ಯರ್ಥಿಗಳು, ಸ್ವಂತ ಖರ್ಚಿನಲ್ಲಿ, ತಮ್ಮ ಅರ್ಜಿಯಲ್ಲಿ ತಿಳಿಸಿರುವ ಮಾಹಿತಿಗಳನುಗುಣಾವಾಗಿ ಎಲ್ಲಾ ಮೂಲ ದಾಖಲಾತಿಗಳೊಡನೆ (ಒಂದು ನೆರಳಚ್ಚು ಪ್ರತಿಯೊಂದಿಗೆ) ಖುದ್ದಾಗಿ, ದಾಖಲಾತಿ ಪರಿಶೀಲನೆಗಾಗಿ, **ದಿನಾಂಕ: 08.12.2023 ರಂದು ಬೆಳಿಗ್ಗೆ 10:30 ಘಂಟೆಗೆ, ಸಿಬ್ಬಂದಿ ಶಾಖೆ, ಕವಿಪ್ರನಿನಿ ಆಡಳಿತ ಕಚೇರಿ, ಒಂದನೇ ಮಹಡಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – 560009** ಇಲ್ಲಿ ಹಾಜರಾಗುವಂತೆ ತಿಳಿಸಲಾಗಿದೆ.

ಸದರಿ ದಿನಾಂಕದಂದು ಯಾವುದೇ ಕಾರಣಗಳಿಂದ ಮೂಲ ದಾಖಲಾತಿ ಪರಿಶೀಲನೆಗೆ ಅಭ್ಯರ್ಥಿಯು ಗೈರುಹಾಜರಾದಲ್ಲಿ, ಅಂತಹ ಅಭ್ಯರ್ಥಿಯನ್ನು ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದೇ ಆಸಕ್ತಿ ಇಲ್ಲವೆಂದು ಭಾವಿಸಿ, ನೇಮಕಾತಿ ಪ್ರಕ್ರಿಯೆಯ ಮುಂದಿನ ಹಂತಕ್ಕೆ ಪರಿಗಣಿಸಲಾಗುವುದಿಲ್ಲ.

**ನಿರ್ದೇಶಕರು**
**(ಆಡಳಿತ ಮತ್ತು ಮಾ.ಸಂ.)**

**ಕವಿಪ್ರನಿನಿಯಲ್ಲಿ ಮೂಲ ದಾಖಲಾತಿ ಪರಿಶೀಲನೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ಸೂಚನೆ:**

ಸಹಾಯಕ ಇಂಜಿನಿಯರ್ (ಸಿವಿಲ್) ಮತ್ತು ಕಿರಿಯ ಇಂಜಿನಿಯರ್ (ಸಿವಿಲ್) ಹುದ್ದೆಗಳಿಗೆ ಸಂಬಂಧಿಸಿದಂತೆ, ಮೂಲ ದಾಖಲಾತಿಗಳ ಪರಿಶೀಲನೆಗಾಗಿ ಅಭ್ಯರ್ಥಿಗಳು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸತಕ್ಕದ್ದು:

1) ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯ ಮುದ್ರಿತ ಪ್ರತಿಯ ಮೇಲೆ ಇತ್ತೀಚಿನ ಪಾಸ್ ಪೋರ್ಟ್ ಅಳತೆ ಕಲರ್ ಭಾವಚಿತ್ರವನ್ನು ಅಂಟಿಸಿ ತರುವುದು.
2) ಕರ್ನಾಟಕ ರಾಜ್ಯದಿಂದ ಮನ್ನಣೆಯಾದ ವಿದ್ಯಾಸಂಸ್ಥೆಯಿಂದ ಪಡೆದ ಎಸ್.ಎಸ್.ಎಲ್.ಸಿ/10ನೇ ತರಗತಿ ಅಂಕಪಟ್ಟಿ/ಪಿ.ಯು.ಸಿ/12ನೇ ತರಗತಿ ಅಂಕಪಟ್ಟಿ.
3) ಮನ್ನಣೆ ಪಡೆದ ವಿಶ್ವವಿದ್ಯಾಲಯದಿಂದ ಪಡೆದಂತಹ ಬಿ.ಇ./ಬಿ.ಟೆಕ್./ಎ.ಎಂ.ಐ.ಇ. ಭಾಗ-ಎ ಮತ್ತು ಬಿ (ಸಿವಿಲ್ ಇಂಜಿನಿಯರಿಂಗ್) ಪದವಿ ಪ್ರಮಾಣ ಪತ್ರ ಮತ್ತು ಎಲ್ಲಾ ಸೆಮಿಸ್ಟರ್/ವರ್ಷಗಳ ಅಂಕಪಟ್ಟಿಗಳು (CGPA/Grade ಇದ್ದಲ್ಲಿ, ವಿಶ್ವವಿದ್ಯಾಲಯದಿಂದ ಅಥವಾ ಕಾಲೇಜಿನಿಂದ ಪಡೆದ conversion table ಅಥವಾ formula ಹಾಜರುಪಡಿಸುವುದು).
4) ಕರ್ನಾಟಕ ರಾಜ್ಯದ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಮನ್ನಣೆ ಪಡೆದ ಕರ್ನಾಟಕದ ಪಾಲಿಟೆಕ್ನಿಕ್ ನಿಂದ ಪಡೆದಂತಹ ಡಿಪ್ಲೊಮಾ (ಸಿವಿಲ್ ಇಂಜಿನಿಯರಿಂಗ್) ಪದವಿ ಪ್ರಮಾಣ ಪತ್ರ ಮತ್ತು ಎಲ್ಲಾ ಸೆಮಿಸ್ಟರ್/ವರ್ಷಗಳ ಅಂಕಪಟ್ಟಿಗಳು (CGPA/Grade ಇದ್ದಲ್ಲಿ, ಪರೀಕ್ಷಾ ಮಂಡಳಿ ಅಥವಾ ಪಾಲಿಟೆಕ್ನಿಕ್ ನಿಂದ ಪಡೆದ conversion table ಅಥವಾ formula ಹಾಜರುಪಡಿಸುವುದು).
5) ಮಾಜಿ ಸೈನಿಕರಾಗಿದ್ದಲ್ಲಿ ಸೇನೆಯಿಂದ ಬಿಡುಗಡೆ ಹೊಂದಿರುವುದಕ್ಕೆ ನಿಗಧಿತ ನಮೂನೆಯಲ್ಲಿ ಪ್ರಮಾಣ ಪತ್ರ.
6) ಗ್ರಾಮೀಣ ಮೀಸಲಾತಿ ಬಯಸಿದ್ದಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವುದನ್ನು ದೃಢೀಕರಿಸಿರುವ ಪ್ರಮಾಣ ಪತ್ರ (ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಸೇನೆನಿ 2005, ದಿನಾಂಕ: 10.8.2005 ರನ್ವಯ). ಸಾಮಾನ್ಯ ವರ್ಗದ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿ ಬಯಸಿದ್ದಲ್ಲಿ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರ.
7) ಕನ್ನಡ ಮಾಧ್ಯಮ ವ್ಯಾಸಂಗ ಮೀಸಲಾತಿ ಬಯಸಿದ್ದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದಕ್ಕೆ ಸಂಬಂಧಪಟ್ಟ ಪ್ರಮಾಣ ಪತ್ರ.

8) ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದಿರುವ ಜಾತಿ/ವರ್ಗದ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರ.
9) ಯೋಜನಾ ನಿರಾಶ್ರಿತ ಮೀಸಲಾತಿ ಬಯಸಿ ಅರ್ಜಿ ಸಲ್ಲಿಸಿರುವವರು ಸಂಬಂಧಪಟ್ಟ ಪ್ರಾಧಿಕಾರಿಯಿಂದ ನಿಗದಿತ ನಮೂನೆಯಲ್ಲಿ ಪಡೆದಿರುವ ಪ್ರಮಾಣ ಪತ್ರ.
10) ವಿಕಲಚೇತನ ಕೋಟಾದಡಿಯಲ್ಲಿ ಮೀಸಲಾತಿ ಬಯಸಿರುವ ಅಭ್ಯರ್ಥಿಗಳು, ನಿಗಧಿತ ನಮೂನೆಯಲ್ಲಿ ಡಿಸೆಬಿಲಿಟಿ (Disability) ಪ್ರಮಾಣ ಪತ್ರವನ್ನು ಮತ್ತು UDID ಕಾರ್ಡ್.
11) ತೃತೀಯ ಲಿಂಗ (Transgender) ಮೀಸಲಾತಿ ಬಯಸುವ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟ್ ರವರಿಂದ ಪ್ರಮಾಣ ಪತ್ರ.
12) ಹೈದರಾಬಾದ್-ಕರ್ನಾಟಕ ವ್ಯಾಪ್ತಿಯ [Article 371 (J)] ಮೀಸಲಾತಿ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವ ಅಭ್ಯರ್ಥಿಗಳು ಸರ್ಕಾರದ ದಿನಾಂಕ 29.01.2014 ರ ಅಧಿಸೂಚನೆಯ ಅನ್ವಯ ಸಕ್ಷಮ ಪ್ರಾಧಿಕಾರದಿಂದ ಪಡೆದ ಸೂಕ್ತ ಪ್ರಮಾಣ ಪತ್ರ.
13) ಸರ್ಕಾರಿ ವೈದ್ಯಾಧಿಕಾರಿಗಳಿಂದ ನಿಗದಿತ ನಮೂನೆಯಲ್ಲಿ ಪಡೆಯಲಾಗಿರುವ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ (Physical Fitness Certificate).
14) ಸರ್ಕಾರದಿಂದ ನೀಡಲಾಗಿರುವ ಭಾವಚಿತ್ರವಿರುವ ಗುರುತಿನ ಚೀಟಿ (Election ID/ Aadhar Card/Ration Card, etc.).

**ಸೂಚನೆ: -**

i) ಮೂಲ ದಾಖಲಾತಿ ಪರಿಶೀಲನೆಗೆ ಅಭ್ಯರ್ಥಿಗಳು, ನಿಗಧಿಪಡಿಸಿರುವ ಸಮಯಕ್ಕಿಂತ 30 ನಿಮಿಷಗಳ ಮೊದಲೇ ವರದಿಮಾಡತಕ್ಕದ್ದು.
ii) ಮೂಲ ದಾಖಲಾತಿಗಳ ಪರಿಶೀಲನೆ ಸಂದರ್ಭದಲ್ಲಿ ಅಭ್ಯರ್ಥಿಗಳು, ಸಂಬಂಧಪಟ್ಟ ದಾಖಲಾತಿಗಳ ಸ್ವಯಂ ದೃಢಿಕೃತ ಒಂದು ನೆರಳಚ್ಚು ಪ್ರತಿಯನ್ನು ಸಲ್ಲಿಸತಕ್ಕದ್ದು.
iii) ಹೆಸರಿಗೆ ಸಂಬಂಧಿಸಿದಂತೆ ಸಣ್ಣಪುಟ್ಟ ಬದಲಾವಣೆಗಳಿದ್ದಲ್ಲಿ, ಅಂತಹ ಅಭ್ಯರ್ಥಿಗಳು Notarised Affidavit ಸಲ್ಲಿಸುವುದು.

-------------------